ಶಿಗ್ಗಾಂವ ತಾಲ್ಲೂಕು ಬಂಕಾಪುರದಲ್ಲಿ 33ಕೆ.ವಿ. ಸ್ಟೇಷನ್ ಪ್ರಾರಂಭ.

1646(2392) ಶ್ರೀ ಕುನ್ನೂರು ಮಂಜುನಾಥ್ ಚೆನ್ನಪ್ಪ (ಶಿಗ್ಗಾಂವ್) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರದಲ್ಲಿ 33ಕೆ.ವಿ. ಸ್ಟೇಷನ್ ಹಾಗೂ ಸವಣೂರು ತಾಲ್ಲೂಕು ಹತ್ತಿಮತ್ತೂರಲ್ಲಿ 33 ಕೆ.ವಿ. ವಿದ್ಯುತ್ ಸ್ಟೇಷನ್ ಪ್ರಾರಂಭಿಸಲಾಗುವುದೇ?

ಆ) ಹಾಗಿದ್ದಲ್ಲಿ ಸದರಿ ಕಾಮಗಾರಿ ಪ್ರಾರಂಭಿಸಲು ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಶಿಗ್ಗಾಂವ್ ತಾಲ್ಲೂಕಿನ ಬಂಕಾಪುರದಲ್ಲಿ 2 x 5 ಎಂ.ವಿ.ಎ ಸಾಮರ್ಥ್ಯದ ಒಂದು 33/11 ಕೆ.ವಿ. ಸ್ಟೇಷನ್ ನ್ನು ಹಾಗೂ ಸವಣೂರು ತಾಲ್ಲೂಕಿನ ಹತ್ತಿರ ಮತ್ತೊರು ಗ್ರಾಮದಲ್ಲಿ 2 x 5 ಕೆ.ಎಂವಿ.ಎ. ಸಾಮರ್ಥ್ಯದ ಒಂದು 33/11 ಕೆ.ವಿ. ಸ್ಟೇಷನ್‌ನ್ನು ಸ್ಥಾಪಿಸಲು ಮಂಡಳಿಯ ತಾಂತ್ರಿಕ ಸಮಿತಿಯು ಜನವರಿ 1999 ರಲ್ಲಿ ಅನುಮೋದನೆ ನೀಡಿದೆ. ಈ ಎರಡೂ ಕಾಮಗಾರಿಗಳಿಗೆ ಗ್ರಾಮೀಣ ವಿದ್ಯುದೀಕರಣ ನಿಗಮವು ಸಾಲ ಸೌಲಭ್ಯಗಳನ್ನೂ ಸಹ ಮಾರ್ಚ್ 99 ರಲ್ಲಿ ಮಂಜೂರು ಮಾಡಿದೆ. ಈ ಎರಡೂ ಸಬ್-ಸ್ಟೇಷನ್ನುಗಳ ನಿರ್ಮಾಣಕ್ಕೆ ಬೇಕಾಗಿರುವ ಭೂಮಿಯು ಲಭ್ಯವಿರುತ್ತದೆ. ಪ್ರಸ್ತುತ ಈ ಎರಡೂ ಕಾಮಗಾರಿಗಳಿಗೆ ವಿವರವಾದ ಯೋಜನಾ ವರದಿಗಳು ತಯಾರಿಸಲ್ಪಟ್ಟಿದ್ದು, ಇವುಗಳಿಗೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿಯನ್ನು ಇತ್ತೀಚೆಗಷ್ಟೆ ಮಾಡಿದೆ. ಈ ಸದರೀ ಕಾಮಗಾರಿಗಳಿಗೆ ಪ್ರಸ್ತುತ ಸಾಲಿನ (1999-2000) ಆಯವ್ಯಯದಲ್ಲಿ ತಲಾ 100 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು, ಈ ಕಾಮಗಾರಿಗಳನ್ನು ಶೀಘ್ರದಲ್ಲಿಯೇ ಪ್ರಾರಂಭ ಮಾಡಿ, 2001ನೇ ಸಾಲಿನ ಜೂನ್ ಮಾಹೆಯ ಅಂತ್ಯದಲ್ಲಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ.

1996ನೇ ಇಸವಿಯಿಂದ ವಾಪಸ್ಸು ಪಡೆದಿರುವ ಕ್ರಿಮಿನಲ್ ಮೊಕದ್ದಮೆಗಳು.

1647(1959) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ 1996 ನೇ ಇಸವಿಯಿಂದ ಇದುವರೆವಿಗೆ ವಾಪಸ್ಸು ಪಡೆಯಲಾದ ಕ್ರಿಮಿನಲ್ ಮೊಕದ್ದಮೆಗಳ ಸಂಖ್ಯೆ ಎಷ್ಟು ;

ಆ) ಹೀಗೆ ವಾಪಸ್ಸು ಪಡೆದ ಮೊಕದ್ದಮೆಗಳನ್ನು ಯಾವ ಯಾವ ಅಪರಾಧಗಳಡಿಯಲ್ಲಿ ಹೂಡಲಾಗಿತ್ತು ;

ಇ) ಅವುಗಳನ್ನು ವಾಪಸ್ಸು ಪಡೆಯಲು ಇರುವ ಪ್ರಮುಖ ಕಾರಣಗಳಾವುವು?